# ಅಖಿಲ ಕರ್ನಾಟಕ ಶ್ರೀಗಂಧ ಮತ್ತು ವನಕೃಷಿ ಬೆಳೆಗಾರರ ಸಂಘ

**ನೋಂದಣಿ ಸಂಖ್ಯೆ** : DRB2/SOR/172/2021-2022

**ನಂ. 300, 14ನೇ ತಿರುವು, 10ನೇ ಮುಖ್ಯ ರಸ್ತೆ, ಎರಡನೇ ಹಂತ, ಇಂದಿರಾನಗರ, ಬೆಂಗಳೂರು-560038.**

**ಮಿಂಚಂಚೆ** : sandalfarmers.22@gmail.com


ಸಂ.ಅಕಶ್ರೀವಬೆಸ/ಸಾ2/2022-23

ದಿನಾಂಕ 31ನೇ ಆಗಸ್ಟ್, 2023
**ನೋಂದಣಿ ಅಂಚೆ ಸ್ವೀಕೃತಿ ಸಹಿತ**

ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ನವರು
ಮಾನ್ಯ ಮುಖ್ಯ ಮಂತ್ರಿಗಳು
ಕರ್ನಾಟಕ ಸರ್ಕಾರ
ವಿಧಾನ ಸೌಧ, 3ನೇ ಮಹಡಿ
ಬೆಂಗಳೂರು 560001.

ಡಾ|| ಜಿ. ಪರಮೇಶ್ವರ್ ರವರು
ಮಾನ್ಯ ಗೃಹ ಸಚಿವರು
ಕರ್ನಾಟಕ ಸರ್ಕಾರ
ಕೊಠಡಿ ಸಂ.327-327 A
3ನೇ ಮಹಡಿ, ವಿಧಾನಸೌಧ
ಬೆಂಗಳೂರು 560001.

ಸನ್ಮಾನ್ಯ ಶ್ರೀ ಈಶ್ವರ ಖಂಡ್ರೆ ರವರು
ಮಾನ್ಯ ಅರಣ್ಯ, ಜೀವಿ ವೈವಿಧ್ಯ ಮತ್ತು
ಪರಿಸರ ಸಚಿವರು
ಕರ್ನಾಟಕ ಸರ್ಕಾರ, ಕೊಠಡಿ ಸಂ.36-37
ಮೊದಲನೇ ಮಹಡಿ, ವಿಕಾಸ ಸೌಧ
ಬೆಂಗಳೂರು 560001.

ಸನ್ಮಾನ್ಯ ಶ್ರೀ ಕೃಷ್ಣಬೈರೇಗೌಡ ರವರು
ಮಾನ್ಯ ಕಂದಾಯ ಸಚಿವರು
ಕರ್ನಾಟಕ ಸರ್ಕಾರ
ಕೊಠಡಿ ಸಂಖ್ಯೆ 244-245
ವಿಕಾಸ ಸೌಧ,
ಬೆಂಗಳೂರು 560001.

ಸನ್ಮಾನ್ಯರೇ

**ವಿಷಯ : ಶ್ರೀಗಂಧ ಬೆಳೆಗಾರರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಕುರಿತು.**

ಅಖಿಲ ಕರ್ನಾಟಕ ಶ್ರೀಗಂಧ ಮತ್ತು ವನಕೃಷಿ ಬೆಳೆಗಾರರ ಸಂಘವು ಒಂದು ಪ್ರಾತಿನಿಧಿಕ ಸಂಸ್ಥೆಯಾಗಿರುತ್ತದೆ. (ಇನ್ನು ಮುಂದೆ "ಸಂಘ'ವೆಂದು ಕರೆಯಲ್ಪಡುವುದು). ಕರ್ನಾಟಕದಾದ್ಯಂತ ನೆಲೆಸಿರುವ ಶ್ರೀಗಂಧ ಬೆಳೆಗಾರರು ಮತ್ತು ವನಕೃಷಿಕರ ಶ್ರೇಯೋಭಿವೃದ್ಧಿಗಾಗಿ ಅಹರ್ನಿಶಿ ಶ್ರಮಿಸುತ್ತಿರುವ ಕಾರ್ಯವನ್ನು ಸಂಘವು ಮಾಡುತ್ತಿದೆ. ಕೃಷಿಕರು ಅರಣ್ಯದ ಹೊರಗೆ ಹೆಚ್ಚು ಹೆಚ್ಚಾಗಿ ಮರ ಗಿಡಗಳನ್ನು ನೆಟ್ಟು ಹಸಿರು ಕವಚವನ್ನು ಹೊದಿಸಲು ಪ್ರೇರೇಪಿಸುವ ಮಹತ್ಕಾರ್ಯವನ್ನೂ ಮಾಡುತ್ತಿದೆ. ಸರ್ಕಾರದ ವಿವಿಧ ಯೋಜನೆಗಳನ್ನು ರೈತರ ಮನೆ ಬಾಗಿಲಿಗೆ ಕೊಂಡೊಯ್ಯಲು ವಿವಿಧ ರೀತಿಯಲ್ಲಿ ಪ್ರಯತ್ನಗಳನ್ನು ಮಾಡುತ್ತಿದೆ. ಕರ್ನಾಟಕ ರಾಜ್ಯವನ್ನು **ಶ್ರೀಗಂಧದ ನಾಡು, ಚಂದನದ ಬೀಡು** ಎಂಬ ಖ್ಯಾತಿಗೆ ಚ್ಯುತಿ ಬಾರದಂತೆ ಹಾಗೂ ರೈತರ ಹಿತಾಸಕ್ತಿಗಳಿಗೆ ಧಕ್ಕೆಯಾಗದಂತೆ ಸಂಘವು ಗಮನ ಹರಿಸಿ ವಿವಿಧ ರೀತಿಯ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ನಿರತವಾಗಿದೆ. ಶ್ರೀಗಂಧ ರೈತರು ಎದುರಿಸುತ್ತಿರುವ ಕೆಲವು ಜ್ವಲಂತ ಸಮಸ್ಯೆಗಳನ್ನು ಮನವಿಗಳ ಮೂಲಕ ಸಲ್ಲಿಸಿದ್ದು ಅವುಗಳನ್ನು ತಮ್ಮ ಆದ್ಯ ಗಮನಕ್ಕೆ ತರಲು ಇಚ್ಛಿಸಿದೆ.

ಕೆಳಕಂಡ ರೈತರು ತಮಗೂ ಮತ್ತು ಸಂಘಕ್ಕೆ ಪತ್ರಗಳನ್ನು ಬರೆದಿದ್ದು, (ಪ್ರತಿಗಳನ್ನು ಲಗತ್ತಿಸಿದೆ), ವಿವರಗಳು ಸ್ವಯಂವೇದ್ಯವಾಗಿವೆ. ಈ ಎಲ್ಲ ವಿಷಯಗಳ ಬಗ್ಗೆ ಸಂಘವು ಕಳೆದ ಎರಡು ವರ್ಷದಿಂದ ಕೆಳಕಂಡ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡುತ್ತಾ ಬಂದಿದೆ.

1. **ಮಂಜುನಾಥ ಬಿನ್ ಶಿವರಾಯಪ್ಪ ಹಟ್ಟಿ, ಸೋಮಸಾಗರ ಗ್ರಾಮ, ಕನಕಗಿರಿ ತಾಲ್ಲೂಕು, ಕೊಪ್ಪಳ ಜಿಲ್ಲೆ. ಪಿನ್ 583283. ಮನವಿ ದಿನಾಂಕ 01.08.2023.**

ಅರಣ್ಯ ಇಲಾಖೆಯು ಶ್ರೀಗಂಧ ಬೆಳೆಯನ್ನು ಕೃಷಿ ಭೂಮಿಯಲ್ಲಿ ಅವೈಜ್ಞಾನಿಕವಾಗಿ ಅನುಷ್ಠಾನ ಮಾಡಿದ್ದು, ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಲ್ಲಿ ಅನೇಕ ವಂಚನೆಗಳಾಗಿದ್ದು, ಈ ವಿಷಯವನ್ನು ರೈತಸ್ನೇಹಿ ತೋಟಗಾರಿಕೆ ಇಲಾಖೆಗೆ ವಹಿಸುವಂತೆ ಆಗ್ರಹ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ರೈತರ ಹಿತದೃಷ್ಟಿಯಿಂದ ಸರ್ಕಾರವು ಶ್ರೀಗಂಧ ವಿಷಯವನ್ನು ತೋಟಗಾರಿಕೆ ಇಲಾಖೆಗೆ ವಹಿಸುವ ತೀರ್ಮಾನವನ್ನು ತ್ವರಿತವಾಗಿ ತೆಗೆದುಕೊಳ್ಳಬೇಕೆಂದು ವಿನಂತಿಸಿದೆ.

ಈ ರೈತರು ನೆಟ್ಟಿದ್ದ ಶ್ರೀಗಂಧದ ಮರಗಳಿಗೆ ಯಾರೋ ಬೆಂಕಿ ಹಾಕಿದ್ದು, ಅದನ್ನು ನಂದಿಸಲು ಅಗ್ನಿಶಾಮಕ ದಳದವರು ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಿ ನಂತರ ರೂ. 5000/-ಗಳನ್ನು ಊಟದ ಖರ್ಚಿಗೆ ಬೇಡಿಕೆ ಇಟ್ಟಿದ್ದು, ಒಂದು ಮನಕಲಕುವ ಘಟನೆಯಾಗಿದೆ. ಅಮೂಲ್ಯವಾದ ಶ್ರೀಗಂಧದ ಮರಗಳನ್ನು ಕಳೆದುಕೊಂಡು, ನೋವಿನಲ್ಲಿರುವಾಗ ಅಗ್ನಿಶಾಮಕ ದಳದವರ ಇಂತಹ ಬೇಡಿಕೆ ಅಮಾನವೀಯವಾದುದೆಂದು ಸಂಘವು ಭಾವಿಸುತ್ತದೆ. ಆದುದರಿಂದ ಸದರಿ ಇಲಾಖೆಗೆ ಇಂತಹ ಬೇಡಿಕೆಗಳನ್ನು ನೊಂದು ಬೆಂದ ರೈತರಿಗೆ ಇಡಬಾರದೆಂದು, ಇಂತಹ ಸಂಧರ್ಭಗಳಲ್ಲಿ ಮಾನವೀಯತೆಯ ಸ್ಪರ್ಶವಿರಬೇಕೇ ವಿನಃ, ವಿನಾಕಾರಣ ಹಣ ಬೇಡಬಾರದೆಂಬ ಸ್ಪಷ್ಟ ಸೂಚನೆಗಳನ್ನು ನೀಡಬೇಕೆಂದು ಸಂಘವು ವಿನಂತಿಸುತ್ತದೆ.

ಮುಂದುವರೆಯುತ್ತಾ, ನೊಂದ ರೈತ ಪರಿಹಾರಕ್ಕಾಗಿ ಪೊಲೀಸ್, ಅರಣ್ಯ ಮತ್ತು ಕಂದಾಯ ಇಲಾಖೆಗಳಿಗೆ ಹೋದಾಗ ಆಗಿರುವ ಮಾನಸಿಕ ಕ್ಷೋಭೆಯ ಬಗ್ಗೆ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಿ, ಬಡ ರೈತರಿಗೆ ಇಂತಹ ನೋವನ್ನುಂಟುಮಾಡುವ ಮಾತುಗಳನ್ನಾಡಬಾರದೆಂದು ತಿಳುವಳಿಕೆ ನೀಡಬೇಕೆಂದು ಸಂಘವು ವಿನಂತಿಸುತ್ತದೆ.

ಇದೇ ರೈತರ ಜಮೀನಿನಲ್ಲಿ ದಿನಾಂಕ 22.07.2022ರ ರಾತ್ರಿ ಶ್ರೀಗಂಧದ ಮರಗಳ ಕಳುವಿಗೆ ಪ್ರಯತ್ನ ಮಾಡಲಾಗಿದ್ದು, ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಬಂದು ಹೋಗಿದ್ದು, ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಭ್ರಮನಿರಸನಗೊಂಡಿರುತ್ತಾರೆ. ರೈತರ ವಿಷಯದಲ್ಲಿ ನಿರ್ಲಕ್ಷ ತೋರಿರುವ ಆರಣ್ಯ ಇಲಾಖೆಯ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸಂಘವು ಆಗ್ರಹಿಸುತ್ತದೆ.

ಸದರಿ ರೈತರ ಆಶಯದಂತೆ, ಶ್ರೀಗಂಧ ಬೆಳೆಗೆ ಸಾಲ ಸೌಲಭ್ಯ, ವಿಮೆ ಸೌಲಭ್ಯಕ್ಕಾಗಿ ಈ ವಿಷಯವನ್ನು ತೋಟಗಾರಿಕೆ ಇಲಾಖೆಗೆ ವಹಿಸಬೇಕೆಂದು ಮಾಡಿಕೊಂಡುರುವ ಮನವಿಗೆ ಸಂಘವು ಸಹಮತವನ್ನು ವ್ಯಕ್ತಪಡಿಸುತ್ತಾ, ಈ ವಿಷಯವನ್ನು ಅರಣ್ಯ ಇಲಾಖೆಯಿಂದ ಬೇರ್ಪಡಿಸಬೇಕೆಂದು ಸಂಘವು ಒತ್ತಾಯಿಸುತ್ತದೆ.

ಪೊಲೀಸ್ ಇಲಾಖೆಯು ಕರ್ನಾಟಕ ಅರಣ್ಯ ಕಾಯಿದೆ ಕಲಮು 86, 87ರಡಿ ದೂರು ದಾಖಲಿಸುವಂತೆ ನಿರ್ದೇಶನಗಳನ್ನು ನೀಡಲು ಸಂಘವು ವಿನಂತಿಸುತ್ತದೆ.

2. **ಹೊಂಬೇಗೌಡ ಬಿನ್ ಸುಬ್ಬೇಗೌಡ, ಬಾಣಸಮುದ್ರ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ. ಪಿನ್ 571421. ಮನವಿ ದಿನಾಂಕ 01.08.2023.**

ಅರಣ್ಯ ಇಲಾಖೆಯು ಶ್ರೀಗಂಧ ಬೆಳೆಯನ್ನು ಕೃಷಿ ಭೂಮಿಯಲ್ಲಿ ಅವೈಜ್ಞಾನಿಕವಾಗಿ ಅನುಷ್ಠಾನ ಮಾಡಿದ್ದು, ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಲ್ಲಿ ಅನೇಕ ವಂಚನೆಗಳಾಗಿದ್ದು, ಈ ವಿಷಯವನ್ನು ರೈತಸ್ನೇಹಿ ತೋಟಗಾರಿಕೆ ಇಲಾಖೆಗೆ ವಹಿಸುವಂತೆ ಆಗ್ರಹ ಮಾಡಲಾಗಿದೆ. ರೈತರಿಗೆ ಯಾವುದೇ ಮಾರ್ಗದರ್ಶನವಿಲ್ಲದೇ ಅರಣ್ಯ ಇಲಾಖೆಯ ಅಧಿಕಾರಿಗಳು ನಡೆದುಕೊಂಡಿದ್ದು, ರೈತರು ಬೇಸತ್ತಿರುವುದನ್ನು ಈ ಅಂಶಗಳಿಂದ ಗ್ರಹಿಸಬಹುದಾಗಿದೆ. ಇದೇ ವಿಷಯದ ಬಗ್ಗೆ ಅರಣ್ಯ ಇಲಾಖೆಗೆ ಸಾಕಷ್ಟು ಪತ್ರಗಳನ್ನು ಸಂಘವು ಬರೆದಿದ್ದು ಯಾವುದೇ ಸ್ಪಂದನಶೀಲ ಕಾರ್ಯವಾಗಿರುವುದಿಲ್ಲ.

**ಶ್ರೀಗಂಧ ಬೆಳೆಗಾರರಿಗೆ ಬೆಳೆರಕ್ಷಣೆ ಮತ್ತು ಪ್ರಾಣ ರಕ್ಷಣೆಗಾಗಿ ಬಂದೂಕು ಪರವಾನಗಿಗಾಗಿ ಅರ್ಜಿ ಸಲ್ಲಿಸಲು ಹೋದಾಗ ಆಗಿರುವ ಕಹಿ ಅನುಭವವು, ಶ್ರೀಗಂಧ ಬೆಳೆಗಾರರಲ್ಲಿ ಅಧೈರ್ಯ ಮೂಡಿಸಿದೆ.** ಈ ನಿಟ್ಟಿನಲ್ಲಿ, ಸರ್ಕಾರವು ಒಂದು ಧೃಡ ನಿರ್ಧಾರವನ್ನು ಕೈಗೊಂಡು, ಶ್ರೀಗಂಧ ಬೆಳೆಯುವ ಎಲ್ಲಾ ರೈತರಿಗೆ ಶಸ್ತ್ರಾಸ್ತ್ರ ಹೊಂದಲು ಅನುಮತಿ ನೀಡಲು ಕ್ರಮ ವಹಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲು ವಿನಂತಿಸಿದೆ. ಇದಕ್ಕೆ ಪ್ರಮುಖ ಕಾರವೇನೆಂದರೆ, ಕಳ್ಳರು ರೈತರ ಮೇಲೆ ಎರಗಿ ಬೀಳುವ ಅಥವಾ ಅವರನ್ನು ಹೆದರಿಸುವ ಎಲ್ಲಾ ಸಾಧ್ಯತೆಗಳು ಇರುತ್ತವೆ. ಇದಕ್ಕೆ **ದಿನಾಂಕ 30.08.2023ರಂದು ಬನ್ನೇರುಘಟ್ಟ ಕಾಯ್ದಿರಿಸಿದ ಅರಣ್ಯದಲ್ಲೇ ನಡೆದ ಘಟನೆಯನ್ನು ಸರ್ಕಾರದ ಗಮನಕ್ಕೆ ತಂದಿದೆ. ಹತ್ತಾರು ಜನ ಅರಣ್ಯ ಕಾಯುತ್ತಿರುವ ರಕ್ಷಣಾ ಸಿಬ್ಬಂದಿಗೇ ಈ ರೀತಿಯ ಪ್ರಾಣ ಬೆದರಿಕೆ ಇದ್ದರೆ, ಇನ್ನು ತೋಟಗಳ ಒಂಟಿ ಮನೆಗಳಲ್ಲಿ ಒಂಟಿ ರೈತರ ಪಾಡೇನು ಎಂಬುದನ್ನು ಸರ್ಕಾರವು ಊಹಿಸಬಹುದಾಗಿದೆ. ಆದುದರಿಂದ ಶ್ರೀಗಂಧ ರೈತರ ನೈಜ ಬೇಡಿಕೆಯನ್ನು ಈಡೇರಿಸಬೇಕೆಂದು ಸಂಘದ ಒಕ್ಕೊರಲಿನ ಆಗ್ರಹವಾಗಿದೆ.**

ಕನ್ನಡಪ್ರಭ

# ಶ್ರೀಗಂಧಚೋರ ಅರಣ್ಯ ರಕ್ಷಕರ ಗುಂಡೇಟಿಗೆ ಬಲಿ

## ಬನ್ನೇರುಘಟ್ಟ ಅರಣ್ಯ ವ್ಯಾಪ್ತಿಯಲ್ಲಿ ಶೂಟೌಟ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು ದಕ್ಷಿಣ

ಅರಣ್ಯ ರಕ್ಷಕರು ಹಾರಿಸಿದ ಗುಂಡೇಟಿಗೆ ಒಬ್ಬ ಬಲಿಯಾಗಿ ಮತ್ತೊರ್ವ ಪರಾರಿಯಾದ ಘಟನೆ ಬನ್ನೇರುಘಟ್ಟ ಪೊಲೀಸ್ ಠಾಣೆ ವ್ಯಾಪ್ತಿಯ ಕಲ್ಕೆರೆಯ ವಲಯದಲ್ಲಿ ನಡೆದಿದೆ.

ಅರಣ್ಯದಲ್ಲಿ ಅತಿಕ್ರಮವಾಗಿ ಪ್ರವೇಶ ಮಾಡಿ ಶ್ರೀಗಂಧ ಮರ ಕಡಿಯಲು ಬಂದಿದ್ದ ಕೋಲಾರ ಜಿಲ್ಲೆಯ ಮಾಲೂರು ಮೂಲದ ತಿಮ್ಮರಾಯಪ್ಪ ಗುಂಡೇಟಿಗೆ ಬಲಿಯಾದ ವ್ಯಕ್ತಿ. ಅರಣ್ಯ ರಕ್ಷಕ ವಿನಯ್ ಕುಮಾರ್ ಹಾರಿಸಿದ ಗುಂಡಿಗೆ ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ಬುಧವಾರ ಮುಂಜಾನೆ 3.30ರ ಸುಮಾರಿಗೆ ಅರಣ್ಯ ರಕ್ಷಕರಿಗೆ ಮರ ಕಡಿಯುವ ಶಬ್ದ ಕೇಳಿದೆ. ತಕ್ಷಣ ಸ್ಥಳಕ್ಕೆ ತೆರಳಿದಾಗ ಗಂಧದ ಮರ ಕಡಿಯುತ್ತಿರುವುದು ಖಚಿತವಾಗಿದೆ. ಮರ ಕಡಿಯುತ್ತಿದ್ದವರಿಗೆ ಶರಣಾಗುವಂತೆ ಅರಣ್ಯ ರಕ್ಷಕರು ಸೂಚಿಸಿದ್ದಾರೆ. ಇದನ್ನು ಲೆಕ್ಕಿಸದೆ ಆರೋಪಿಗಳು ಮಚ್ಚಿನಿಂದ ಹಲ್ಲೆ ನಡೆಸಿ, ಪರಾರಿಯಾಗಲು ಮುಂದಾಗಿದ್ದಾರೆ. ಈ ಸಂದರ್ಭದಲ್ಲಿ ಜೀವರಕ್ಷಣೆಗಾಗಿ ಅರಣ್ಯ ರಕ್ಷಕ ವಿನಯ್ ಕುಮಾರ್ ಹಾರಿಸಿದ ಗುಂಡಿಗೆ ತಿಮ್ಮರಾಯಪ್ಪ ಸ್ಥಳದಲ್ಲೇ ಕುಸಿದು ಅಸುನೀಗಿದ್ದಾನೆ.

ಸ್ಥಳಕ್ಕೆ ಶ್ವಾನದಳ, ಬೆರಳಚ್ಚು ತಜ್ಞರು ಹಾಗೂ ವಿಧಿ ವಿಜ್ಞಾನ ಪ್ರಯೋಗಾಲಯದ ತಂಡದ ಜೊತೆಯಲ್ಲಿ ದೌಡಾಯಿಸಿದ ಬನ್ನೇರುಘಟ್ಟ ಪೊಲೀಸರು ಅರಣ್ಯ ರಕ್ಷಕರಿಂದ ಘಟನೆಯ ಸಂಪೂರ್ಣ ಮಾಹಿತಿ ಕಲೆ ಹಾಕಿದರು. ಬಳಿಕ ಕೇಸು ದಾಖಲು ಮಾಡಿದ್ದಾರೆ. ತಲೆ ಮರೆಸಿಕೊಂಡಿರುವ ಮತ್ತೊರ್ವ ಆರೋಪಿಗಾಗಿ ಬಲೆ ಬೀಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಎಸ್.ಪಿ. ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಶ್ರೀಗಂಧ ಮರ ಚೋರರ ಮೇಲೆ ಶೂಟ್ ಔಟ್ ಘಟನೆಗೆ ಸಂಬಂಧಿಸಿದಂತೆ ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆಸಲಾಗುತ್ತಿದೆ. ಘಟನೆಯ ಸಂಪೂರ್ಣ ಮಾಹಿತಿ ಕಲೆ ಹಾಕಲಾಗುತ್ತಿದೆ, ಶೀಘ್ರದಲ್ಲೇ ಮತ್ತೊರ್ವ ಆರೋಪಿಯನ್ನು ಬಂಧಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.



ಗುಂಡೇಟಿಗೆ ಬಲಿಯಾದ ತಿಮ್ಮರಾಯಪ್ಪ.



ಗಂಧ ಕಡಿಯಲು ತಂದಿದ್ದ ಹತಾರಗಳು.

### ಆಗಿದ್ದೇನು?

- ಬುಧವಾರ ಮುಂಜಾನೆ 3.30ಕ್ಕೆ ಮರ ಕಡಿಯುವ ಶಬ್ದ ಕೇಳಿದ ಅರಣ್ಯ ರಕ್ಷಕರು
- ತಕ್ಷಣ ಮರ ಕಡಿಯುವ ಸ್ಥಳಕ್ಕೆ ಆಗಮಿಸಿದ ಅರಣ್ಯ ರಕ್ಷಕರು
- ಶರಣಾಗುವಂತೆ ಆರೋಪಿಗಳಿಗೆ ಎಚ್ಚರಿಕೆ ನೀಡಿದ ಸಿಬ್ಬಂದಿ
- ಇದಕ್ಕೆ ಕ್ಯಾರೇ ಎನ್ನದೆ ಅರಣ್ಯ ಸಿಬ್ಬಂದಿ ಮೇಲೆ ಹಲ್ಲೆಗೆ ಯತ್ನ
- ಆತ್ಮರಕ್ಷಣೆಗಾಗಿ ಗುಂಡಿನ ದಾಳಿ ನಡೆಸಿದ ಅರಣ್ಯ ರಕ್ಷಕರು
- ಓರ್ವ ಸ್ಥಳದಲ್ಲೇ ಮೃತಪಟ್ಟು, ಮತ್ತೊಬ್ಬ ಆರೋಪಿ ಪರಾರಿ

BENGALURU Edition
Aug 31, 2023 Page No. 02
Powered by : eReleGo.com

3. **ಶ್ರೀ ಕಾಶೀನಾಥ್ ಬಿನ್ ಹಾಲಪ್ಪ, ಕೇದಿಗೇರಿ (ತೋಟದಮನೆ) ಹಿರೇನಲ್ಲೂರು ಅಂಚೆ, ಕಡೂರು ತಾಲೂಕು, ಚಿಕ್ಕಮಗಳೂರು ತಾಲೂಕು, ಪಿನ್ 577550. ಮನವಿ ದಿನಾಂಕ 09.08.2023.**

ಈ ರೈತರ ಜಮೀನಿನಲ್ಲಿ ದಿನಾಂಕ 18.07.2023 ಮತ್ತು 02.08,2023ರಂದು 2 ಬಾರಿ ಕಳ್ಳತನಗಳಾಗಿವೆ. ಈ ಕುರಿತು ಅರಣ್ಯ ಮತ್ತು ಪೊಲೀಸ್ ಇಲಾಖೆಗೆ ದೂರು ನೀಡಲಾಗಿ ಯಾವುದೇ ಕ್ರಮವಾಗಿಲ್ಲವೆಂದು ತಿಳಿಸಿರುತ್ತಾರೆ. ಇಂಥಹುದೇ ಕಳ್ಳತನಗಳು ತರೀಕೆರೆ ನಗರ ಠಾಣೆ Cr. No.182/22 ದಿನಾಂಕ 24.07.20022, ತರೀಕೆರೆ ನಗರ ಠಾಣೆ Cr. No. 190/23, ದಿನಾಂಕ 21.07.20022, ಲಿಂಗದಹಳ್ಳಿ ಠಾಣೆಗೆ ದೂರು ಸಲ್ಲಿಸಿದ್ದರೂ ಪ್ರಕರಣ ದಾಖಲಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಇದಲ್ಲದೆ ಸಂಘದ ವತಿಯಿಂದಲೂ ಚಿಕ್ಕಮಗಳೂರು ಉದ್ಯಾನದಲ್ಲಿ ಕಳುವಾಗಿರುವ ಶ್ರೀಗಂಧದ ಮರಗಳ ಬಗ್ಗೆ ಸರ್ಕಾರದ ಆದ್ಯ ಗಮನಕ್ಕೆ ತರಲಾಗಿತ್ತು. ಈ ಹಿನ್ನೆಲೆಯಲ್ಲಿ ಮನವಿದಾರರು ಅರಣ್ಯ ಇಲಾಖೆಯಿಂದ ರೈತರಿಗೆ ಯಾವುದೇ ರೀತಿಯ ರಕ್ಷಣಾತ್ಮಕ ಕ್ರಮಗಳಾಗಲೀ, ಪ್ರಕರಣಗಳನ್ನು ಪತ್ತೆ ಮಾಡುವ ಕಾಳಜಿಯಾಗಲೀ ತೋರುತ್ತಿಲವೆಂದು ಖೇದದಿಂದ ತಿಳಿಸಿರುತ್ತಾರೆ. ರೈತರಿಗೆ ಶ್ರೀಗಂಧ ಬೆಳೆಯಿರಿ ಎಂದು ಆಸೆ ತೋರಿಸಿ, ಬೆಳೆದ ನಂತರ ಕಳ್ಳತನಗಳ ಉಪಟಳವನ್ನು ತಪ್ಪಿಸದೇ ನಡುನೀರಿನಲ್ಲಿ ಕೈಬಿಟ್ಟಿರುವ ಕಹಿ ಅನುಭವವನ್ನು ಹಂಚಿಕೊಂಡಿದ್ದಾರೆ. ಈಗ ಸರ್ಕಾರ ಎಚ್ಚೆತ್ತುಕೊಳ್ಳದಿದ್ದರೆ, ಕರ್ನಾಟಕ ರಾಜ್ಯ **ಶ್ರೀಗಂಧದ ಕಳ್ಳರ ರಾಜ್ಯ** ಎಂಬ ಹಣೆಪಟ್ಟಿ ಕಟ್ಟಿಕೊಳ್ಳಬೇಕಾಗುತ್ತದೆ ಎಂಬ ಮಾತುಗಳು ನಿಜಕ್ಕೂ ಎಚ್ಚರಿಕೆಯ ಘಂಟೆಯನ್ನು ಬಾರಿಸಿದಂತಿದೆ ಎಂದು ಸಂಘವು ಅಭಿಪ್ರಾಯಪಡುತ್ತದೆ.

4. **ಡಾ. ರಾಜೇಂದ್ರ ಯರನಾಳೆ, ಕಲಬುರಗಿ ಜಿಲ್ಲಾ ಅಧ್ಯಕ್ಷರು, ಅಖಿಲ ಕರ್ನಾಟಕ ಶ್ರೀಗಂಧ ಮತ್ತು ವನಕೃಷಿ ಬೆಳೆಗಾರರ ಸಂಘ, ಕಲಬುರಗಿ. ಮನವಿ ದಿನಾಂಕ 13.08.2023.**

ಶ್ರೀಯುತರು ಬರೆದಿರುವ ಪತ್ರದಲ್ಲಿ ತಿಳಿಸಿರುವಂತೆ ಶ್ರೀಗಂಧ ಬೆಳೆಗಾರರು ದಿನ ನಿತ್ಯ ಎದುರಿಸುತ್ತಿರುವ ಶ್ರೀಗಂಧದ ಕಟಾವಣೇ, ಸಾಗಾಣಿಕೆ ಮತ್ತು ಶೇಖರಣೆಗೆ ಸಂಬಂದಿಸಿದ ಸಮಸ್ಯೆಗಳಿಗೆ ಶಾಶ್ವತವಾದ ಪರಿಹಾರವನ್ನು ಅರಣ್ಯ ಇಲಾಖೆಯು ಕಂಡುಕೊಳ್ಳಬೇಕೆಂದು ಸಂಘವು ಆಗ್ರಹಿಸುತ್ತದೆ. ಅರಣ್ಯ ಇಲಾಖೆಯ ಕಪಿಮುಷ್ಟಿಯಿಂದ ಮತ್ತು ಶೋಷಣೆಯಿಂದ ಮುಕ್ತ ಮಾಡಲು ಅರಣ್ಯ ಇಲಾಖೆಯು ಶ್ರೀಗಂಧ ಮರಗಳ ಮೇಲೆ ವಿಧಿಸಿರುವ ಎಲ್ಲಾ ನಿರ್ಬಂಧಗಳನ್ನು ತೆಗೆದುಹಾಕಲು ಸಂಘವು ಮನವಿ ಮಾಡುತ್ತದೆ.

ಈ ಸಂಧರ್ಭದಲ್ಲಿ ಈ ಮೇಲ್ಕಂಡ ಮನವಿಗಳ ಆಧಾರದ ಮೇಲೆ, ವಿನಂತಿ ಮಾಡುವುದೇನೆಂದರೆ, ಈ ಎಲ್ಲಾ ನೊಂದ ರೈತರ ಕೆಳಕಂಡ ಬೇಡಿಕೆಗಳನ್ನು ಈಡೇರಿಸಬೇಕೆಂದು ಸಂಘವು ಮನವಿ ಮಾಡುತ್ತಿದೆ.

1. **ಕೃಷಿ ಭೂಮಿಯ ಮೇಲೆ ಬೆಳೆಯುವ ಶ್ರೀಗಂಧದ ಬೆಳೆಯನ್ನು ತೋಟಗಾರಿಕೆ ಬೆಳೆಯೆಂದು ಪರಿಗಣಿಸಿ ಸಮಸ್ತ ರೈತರಿಗೆ ನ್ಯಾಯ ಒದಗಿಸಬೇಕು,**

2. **ಶ್ರೀಗಂಧ ಬೆಳೆಗಾರರಿಗೆ ಅವರು ಕೃಷಿ ಭೂಮಿಯ ಮೇಲೆ ಬೆಳೆದ ಶ್ರೀಗಂಧ ಬೆಳೆಯನ್ನು ಮುಕ್ತವಾಗಿ ಮಾರಾಟ ಮಾಡಲು ಅರಣ್ಯ ಇಲಾಖೆ ವಿಧಿಸಿರುವ ಎಲ್ಲಾ ನಿರ್ಬಂಧಗಳನ್ನು ತೆಗೆದುಹಾಕಬೇಕು,**

3. **ಅರಣ್ಯ ಇಲಾಖೆ ಕೃಷಿ ಪ್ರೋತ್ಸಾಹ ಯೋಜನೆಯಡಿ ರೈತರನ್ನು ವಂಚಿಸುತ್ತಿದ್ದು ಇದಕ್ಕೆ ಇತಿಶ್ರೀ ಹಾಡಬೇಕು,**

4. **ಕೃಷಿ ಪ್ರೋತ್ಸಾಹ ಯೋಜನೆಯಡಿ ಆಗಿರುವ ಅನ್ಯಾಯ, ಅಕ್ರಮಗಳ ಬಗ್ಗೆ ಲೋಕಾಯುಕ್ತ ತನಿಖೆಯನ್ನು ಆದೇಶಿಸಬೇಕು,**

5. **ಶ್ರೀಗಂಧ ಬೆಳೆಗಾರರಿಗೆ ಬೆಳೆ ರಕ್ಷಣೆ ಮತ್ತು ಪ್ರಾಣ ರಕ್ಷಣೆಗಾಗಿ ಬಂದೂಕು ಹೊಂದಲು ರಹದಾರಿ ಪತ್ರವನ್ನು ಆದ್ಯತೆ ಮೇಲೆ ನೀಡಬೇಕು,**

6. **ಈ ಕುರಿತು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಅನುಕ್ರಮವಾಗಿ ಕಂದಾಯ ಮತ್ತು ಪೊಲೀಸ್ ಇಲಾಖೆಗಳಿಂದ ಸೂಕ್ತ ನಿರ್ದೇಶನಗಳನ್ನು ನೀಡಬೇಕು,**

7. **ರಹದಾರಿ ಪತ್ರ ನೀಡಲು ರೈಫಲ್ ತರಬೇತಿ ಅಗತ್ಯವಿದ್ದರೆ, ತರಬೇತಿ ನೀಡಲು ಪೊಲೀಸ್ ಇಲಾಖೆ ವ್ಯವಸ್ಥೆ ಮಾಡಬೇಕು,**

8. **ಶ್ರೀಗಂಧದ ಕಳ್ಳರ ಜಾಲವನ್ನು ಭೇದಿಸಿ, ಕಳ್ಳ ಮಾಲನ್ನು ಪಡೆಯುತ್ತಿರುವವರನ್ನು (RECEIVERS) ಪತ್ತೆ ಮಾಡಿ ಕಳ್ಳತನಗಳ ಜಾಲವನ್ನು ಕೊನೆಗಾಣಿಸಬೇಕು, ಇದಕ್ಕಾಗಿ ಪೊಲೀಸ್ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳನ್ನೊಳಗೊಂಡಂತೆ, ಒಂದು ವಿಶೇಷ ತಂಡ (SPECIAL INVESTIGATION TEAM) ರಚಿಸಿ ಕಾರ್ಯಾಚರಣೆ ಮಾಡಬೇಕು. ಇದು ಸಂಘದ ಮತ್ತು ಸಮಸ್ತ ರೈತರ ಬಹು ದಿನದ ಬೇಡಿಕೆಯಾಗಿದೆ.**

9. **ರೈತರ ಬಗ್ಗೆ ಸೌಜನ್ಯದಿಂದಲೂ, ಮಾನವೀಯತಿಯಿಂದ ನಡೆದುಕೊಳ್ಳುವಂತೆ ಕಂದಾಯ, ಅರಣ್ಯ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಸರ್ಕಾರವು ಆಯಾ ಇಲಾಖೆಯ ಮುಖ್ಯಸ್ಥರ ಮೂಲಕ ಸೂಕ್ತ ಸುತ್ತೋಲೆ ಹೊರಡಿಸಬೇಕು.**

ಸರ್ಕಾರವು ಕೈಗೊಂಡ ಕ್ರಮಗಳ ಬಗ್ಗೆ ಸಂಘವು ಉತ್ತರವನ್ನು ನಿರಿಕ್ಷಿಸುತ್ತದೆ.

ವಂದನೆಗಳೊಂದಿಗೆ

ಸದಾ ಭೂಮಾತೆಯ ಸೇವೆಯಲ್ಲಿ
ತಮ್ಮ ನಂಬುಗೆಯ

ಕೆ. ಅಮರನಾರಾಯಣ ಐ.ಎ.ಎಸ್ (ನಿವೃತ್ತ)
ಗೌ. ಅಧ್ಯಕ್ಷರು,
ಅಖಿಲ ಕರ್ನಾಟಕ ಶ್ರೀಗಂಧ ಮತ್ತು ವನಕೃಷಿ ಬೆಳೆಗಾರರ ಸಂಘ, ಬೆಂಗಳೂರು

ಅಡಕಗಳು : 4 (ಪುಟ 1ರಿಂದ 31ರವರೆಗೆ)

ಪ್ರತಿಯನ್ನು ಮಾಹಿತಿಗಾಗಿ :

1) ಮಂಜುನಾಥ ಬಿನ್ ಶಿವರಾಯಪ್ಪ ಹಟ್ಟಿ, ಸೋಮಸಾಗರ ಗ್ರಾಮ, ಕನಕಗಿರಿ ತಾಲ್ಲೂಕು, ಕೊಪ್ಪಳ ಜಿಲ್ಲೆ. ಪಿನ್ 583283.
2) ಹೊಂಬೇಗೌಡ ಬಿನ್ ಸುಬ್ಬೇಗೌಡ, ಬಾಣಸಮುದ್ರ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ. ಪಿನ್ 571421.
3) ಶ್ರೀ ಕಾಶೀನಾಥ್ ಬಿನ್ ಹಾಲಪ್ಪ, ಕೇದಿಗೇರಿ (ತೋಟದಮನೆ) ಹಿರೇನಲ್ಲೂರು ಅಂಚೆ, ಕಡೂರು ತಾಲೂಕು, ಚಿಕ್ಕಮಗಳೂರು ತಾಲೂಕು, ಪಿನ್ 577550
4) ಡಾ. ರಾಜೇಂದ್ರ ಯರನಾಳೆ, ಕಲಬುರಗಿ ಜಿಲ್ಲಾ ಅಧ್ಯಕ್ಷರು, ಅಖಿಲ ಕರ್ನಾಟಕ ಶ್ರೀಗಂಧ ಮತ್ತು ವನಕೃಷಿ ಬೆಳೆಗಾರರ ಸಂಘ, ನಂ.31, ರವಿತೇಜ, ಭವಾನಿ ಮಂದಿರ ಎದುರು, ಹೊಸಜೇವರ್ಗಿ ರಸ್ತೆ, ಉದಯನಗರ, ಕಲಬುರಗಿ-585103.

(1)

ಉಲ್ಲೇಖ-1

**ನೋಂದಣಿ ಅಂಚೆ ಸ್ವೀಕೃತಿ ಸಹಿತ**

ಇಂದ

ಸೋಮಸಾಗರ ಗ್ರಾಮ
01 ನೇ ಆಗಸ್ಟ, 2023

ಮಂಜುನಾಥ ಬಿನ್ ಶಿವರಾಯಪ್ಪ ಹಟ್ಟಿ,
ಸೋಮಸಾಗರ ಗ್ರಾಮ, ಕನಕಗಿರಿ ತಾಲ್ಲೂಕು,
ಕೊಪ್ಪಳ ಜಿಲ್ಲೆ. ಪಿನ್ 583283.

8/8


ರವರಿಗೆ

ಶ್ರೀ ಸಿದ್ದರಾಮಯ್ಯ ನವರು
ಮಾನ್ಯ ಮುಖ್ಯ ಮಂತ್ರಿಗಳು
ಕರ್ನಾಟಕ ಸರ್ಕಾರ,
ವಿಧಾನ ಸೌಧ, ಮೂರನೇ ಮಹಡಿ
ಬೆಂಗಳೂರು 560001.

ಮಾನ್ಯರೇ,

**ವಿಷಯ: ಶ್ರೀಗಂಧ ಮರಗಳ ಕಳ್ಳತನದ ಬಗ್ಗೆ.**

ಈ ಮೂಲಕ ತಮ್ಮಲ್ಲಿ ಗೌರವಪೂರ್ವಕವಾಗಿ ವಿನಂತಿಸಿಕೊಳ್ಳುವುದೇನೆಂದರೆ, ಈ ಕೆಳಗೆ ಸಹಿ ಮಾಡಿದ ನಾನು ಡಿಸೆಂಬರ್ 2009 ರಲ್ಲಿ ನಮ್ಮ ಜಮೀನು ಸರ್ವೆ ನಂಬರ್ 131ರ, 30 ಎಕರೆ ಜಮೀನಿನಲ್ಲಿ ಶ್ರೀಗಂಧ, ಸೀಬೆ, ಮಾವು, ರೆಡ್ ಸ್ಯಾಂಡರ್ ರಕ್ತಚಂದನ ಹಾಗೂ ಇತರೆ ಬೆಳೆಗಳನ್ನು ಬೆಳೆದಿರುತ್ತೇನೆ. ಶ್ರೀಗಂಧ ಕೋಠಿ ಶಿವಮೊಗ್ಗದಿಂದ 09-07-2009ರಂದು 5416 ಶ್ರೀಗಂಧ ಸಸಿಗಳನ್ನು ₹ 65,000/- ಡಿ.ಡಿ ಕೊಟ್ಟು (₹14/- ಪ್ರತಿ ಸಸಿಗೆ) ಕೊಂಡು ತಂದಿರುತ್ತೇನೆ. ಈ ಬಾಬತ್ತಿನ ರಸೀದಿಗಳನ್ನು ಮರುಮುದ್ರಿಸಿದೆ.


KARNATAKA SOAPS & DETERGENTS LIMITED
SANDALWOOD CR. DIVISION, SHIMOGA 577 201.
(KARNATAKA)

DELIVERY CHALLAN/PACKING SLIP

As per Bill no. 156/9.7.09

M/s Sri Manjunath S/o Shivarayappa Hatti
78, Somanala, Gangavathi, Koppala
Mob. 9901999413

No. KA

Date 9.7.2009

Please receive the following materials in good order and condition and return the duplicate

| Name of the Product | Description | Packing No. | Quantity in Kgs | Tin No. |
| --- | --- | --- | --- | --- |
| Sandal Saplings | Packed in 6"x9" Poly Bags | in Packet | 5416 Nos. | |


Five thousand four hundred sixteen Saplings

Store Keeper. W.W.O. Section Officer

For KARNATAKA SOAPS & DETERGENTS LTD.
Asst. (Sales) Manager

1) Our risk and responsibility ceases on delivery of the goods.
Received the above goods in good condition.

Signature of the Customer/His authorised agent


No. 29 KSDL Shimoga Date 09 07 09

RECEIVED with thanks from
Sri Manjunath S/o Shivarayappa Hatti No. 78
Somanala, Gangavathi Koppala
Mob. 9901999413
the sum of Rupees Sixty five thousand only
Vide DD No. 810997/29.6.09 in Full/Part Payment of
Our Bill No. 156 Dated 09 07 09 by Cheque/Cash (DD)
Rs. 65,000/-

Karnataka Soaps & Detergents Ltd.
This receipt is valid subject to realisation of cheque.

ಶ್ರೀಗಂಧ ಸಸಿ ಜೊತೆ 6 x 9 ಪ್ಯಾಕೇಟಿನಲ್ಲಿ ಚಿಕ್ಕ ಸಸಿ ಇತ್ತು. ಆದರೆ ಶ್ರೀಗಂಧದ ಸಸಿಗಳ ಯಾವುದೇ ಅತಿಥಿ ಸಸಿಗಳನ್ನು ಕೊಟ್ಟಿರುವುದಿಲ್ಲ, ಹಾಗೂ ಅತಿಥಿ ಸಸಿಗಳನ್ನು ಶ್ರೀಗಂಧದ ಸಸಿ ಜೊತೆ ನೆಡಬೇಕೆಂದು ತಿಳಿಸಿರುವುದಿಲ್ಲ. 5-6 ತಿಂಗಳ ನಂತರ ಮತ್ತೆ 3000 ಶ್ರೀಗಂಧ ಸಸಿಗಳನ್ನು ಕರ್ನಾಟಕ ಸೋಪು ಮತ್ತು ಡಿಟರ್ಜೆಂಟ್ ಲಿಮಿಟೆಡ್, ಶ್ರೀಗಂಧ ಎಣ್ಣೆ ಡಿವಿಜನ್, ಶಿವಮೊಗ್ಗದಿಂದ ತಂದು ಒಟ್ಟು 8416 ಶ್ರೀಗಂಧ ಸಸಿಗಳನ್ನು ನಾಟಿ ಮಾಡಿದ್ದು ಇರುತ್ತದೆ. ಅರಣ್ಯ ಇಲಾಖೆ ಯಾವುದೇ ಅತಿಥಿ ಸಸಿಗಳನ್ನು ಕೊಡುವುದಾಗಲಿ, ಅತಿಥಿ ಸಸಿಗಳನ್ನು ಶ್ರೀಗಂಧ ಜೊತೆ ಕಡ್ಡಾಯವಾಗಿ ನೆಡಬೇಕೆಂದು ಮಾಹಿತಿ ಸಹ ನೀಡದೆ ಇರುವುದರಿಂದ ಸಾವಿರಾರು ಸಸಿಗಳು ಒಣಗಿಹೋದವು. ಸದ್ಯ ಅಂದಾಜು 2,100 ಶ್ರೀಗಂಧ ಮರಗಳು ಉಳಿದಿರಬಹುದು. ನನಗೆ ಕರ್ನಾಟಕ ಅರಣ್ಯ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ಅಡಿ ಯಾವುದೇ ಧನಸಹಾಯ ಕೇಳಿದರೂ

ಅರಣ್ಯ ಇಲಾಖೆಯವರು ಕೊಟ್ಟಿರುವುದಿಲ್ಲ. ಇದು ಅವೈಜ್ಞಾನಿಕವಾಗಿ ಮಾಡಿರುವ ಕಾರ್ಯವಾಗಿದೆ. ಒಟ್ಟಾರೆಯಾಗಿ ಹೇಳುವುದಾದರೆ ಅರಣ್ಯ ಇಲಾಖೆ ರೈತರ ಪಾಲಿಗೆ ಒಂದು ಶಾಪವಾಗಿದೆ.

ಸುಮಾರು 15 ವರ್ಷದಿಂದ ಶ್ರೀಗಂಧ ಬೆಳೆದ ಹೊಲದಲ್ಲೇ ಕುಟುಂಬ ಸಮೇತ ವಾಸವಾಗಿರುತ್ತೇವೆ. ದಿನಾಂಕ 16.01.2023 ರಂದು ಮಧ್ಯಾಹ್ನ ನಾನು ಬೇರೆ ಊರಿಗೆ ಹೋದಾಗ, ಯಾರೋ ಕಿಡಿಗೇಡಿಗಳು ಹೊಲಕ್ಕೆ ಬೆಂಕಿ ಹಚ್ಚಿದ್ದು, ತಕ್ಷಣ ನಮ್ಮ ಕೂಲಿ ಅಳುಗಳು ಹಾಗೂ ನಾನು ಸಹ ಹೋಗಿ ಅಗ್ನಿಶಾಮಕ ದಳಕ್ಕೆ ಕರೆಸಿಕೊಂಡು ಬೆಂಕಿ ನಂದಿಸಿರುತ್ತೇವೆ. ಸುಮಾರು 5 ಎಕರೆ ಶ್ರೀಗಂಧ-200, ಪೇರಲ-50, ಮಾವು-340 ಗಿಡಗಳು ಸುಟ್ಟು ಹೋಗಿರುತ್ತವೆ. ಅಗ್ನಿಶಾಮಕ ದಳದವರು ಬೆಂಕಿ ನಂದಿಸಿದ ನಂತರ ಊಟಕ್ಕೆ ಬೇಕೆಂದು ₹ 5000/- ಕೇಳಿದರು. ನಮ್ಮ ಹೊಲವೇ ಸುಟ್ಟು ನಾಶವಾಗಿದೆ ಎಲ್ಲಿಂದ ಹಣ ಕೊಡುವುದು ಎಂದು ಹೇಳಿದಾಗ, ರೈತರ ಹಣೆಬರಹ ಇಷ್ಟೇ ಅಂತ ಇನ್ನೂ ಏನೇನೋ ಬೈದು ಹೋದರು, ನನಗೆ ತುಂಬಾ ನೋವಾಯಿತು.

ನಂತರ ಸುಟ್ಟ ಬಗ್ಗೆ ಕನಕಗಿರಿ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದರೆ, ತೆಗೆದುಕೊಳ್ಳದೆ ಬಂದು ನೋಡಿ ಹೋದರು. ಕೇಸು ದಾಖಲಿಸಲಿಲ್ಲ. ಅದರಂತೆ ಅರಣ್ಯ ಇಲಾಖೆ ಆರ್.ಎಫ್.ಓ ಗಂಗಾವತಿರವರಿಗೆ ತಿಳಿಸಲಾಗಿ, ಒಬ್ಬ ಫಾರೆಸ್ಟ್ ಗಾರ್ಡ್ ಬಂದು ನೋಡಿ ಹೋದರು. ನಂತರ ನಷ್ಟದ ಬಗ್ಗೆ ಗಂಗಾವತಿಗೆ ಹೋಗಿ ತಹಸೀಲ್ದಾರರಿಗೆ ತಿಳಿಸಲಾಗಿ, ತಹಸೀಲ್ದಾರರೇ, ನಿಮಗೆ ಶ್ರೀಗಂಧ ಬೆಳೆಯಲು ಯಾರು ಹೇಳಿದರು? ಅದು ಶ್ರೀಮಂತರ ಬೆಳೆ, ಅದಕ್ಕೆ ಇನ್ಸೂರೆನ್ಸ್ ಇಲ್ಲ, ಬೆಳೆ ಹಾನಿ ಕೊಡಲು ಬರುವುದಿಲ್ಲ ಅಂತ ತಿಳಿಸಿ ಕಳುಹಿಸಿದರು. ಹಾಗೂ ನಮ್ಮ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ ಅಂತ ತಿಳಿಸಿದರು. ತಹಸೀಲ್ದಾರರ ಇಂತಹ ಮಾತುಗಳಿಂದ ನನಗೆ ತುಂಬಾ ಹತಾಶೆಯಾಗಿದೆ. ಹೊಲದಲ್ಲಿ ಗಿಡಮರಗಳು ಸುಟ್ಟ ಬಗ್ಗೆ ಫೋಟೋಗಳನ್ನು ಲಗತ್ತಿಸಲಾಗಿದೆ. ಅಷ್ಟೊಂದು ಕಷ್ಟಪಟ್ಟು ಬೆಳೆದ ಶ್ರೀಗಂಧದ ಮರಗಳಿಗೆ ಪರಿಹಾರವೂ ನನಗೆ ದೊರೆತಿರುವುದಿಲ್ಲ. ಈಗಲಾದರೂ ರೈತಪರ ಚಿಂತನೆಯ ನಿಮ್ಮ ಸರ್ಕಾರದಲ್ಲಿ ನನಗೆ ನ್ಯಾಯ ದೊರಕಿಸಿಕೊಡಿರೆಂದು ಬೇಡುತ್ತೇನೆ.

**ಸುಟ್ಟುಹೋದ ಶ್ರೀಗಂಧದ ತೋಟದ ಛಾಯಾ ಚಿತ್ರಗಳು**







ದಿನಾಂಕ 22-07-2023ರಂದು ರಾತ್ರಿ ಯಾರೋ ಕಳ್ಳರು 9 ಶ್ರೀಗಂಧದ ಮರಗಳನ್ನು ಕತ್ತರಿಸಿದ್ದು, ನಾಯಿ ಬೊಗಳಿದ ನಂತರ ನಾವು ಎಚ್ಚರವಾಗಿ ಬ್ಯಾಟರಿ ಹಾಕಿಕೊಂಡು ಹೋದಾಗ, ಕಳ್ಳರು ಕತ್ತರಿಸಿದ ಮರಗಳನ್ನು ಅಲ್ಲೇ ಬಿಟ್ಟು ಹೋಗಿರುತ್ತಾರೆ. ದಿನಾಂಕ 23.07.2023 ರಂದು ಕನಕಗಿರಿ ಪೊಲೀಸ್ ಠಾಣೆಗೆ ದೂರು ಕೊಡಲು ಹೋದರೆ, ಪೊಲೀಸರು ಶ್ರೀಗಂಧದ ಗಿಡಗಳನ್ನು ಕತ್ತರಿಸಿ ಬಿಟ್ಟು ಹೋಗಿರುತ್ತಾರೆ, ಒಯ್ದಿರುವುದಿಲ್ಲ, ಆದ್ದರಿಂದ ಕೇಸು ಮಾಡುವುದಿಲ್ಲ ಅಂತ ಹೇಳಿ, ಹೊಲಕ್ಕೆ ಬಂದು ನೋಡಿ ಹೋಗಿರುತ್ತಾರೆ. ಅದರಂತೆ ಅರಣ್ಯ ಇಲಾಖೆ ಸಿಬ್ಬಂದಿ ಬಂದು ಹೊಲ ನೋಡಿ ಹೋಗಿರುತ್ತಾರೆ. ಅವರೂ ಸಹ ಕೇಸು ಮಾಡಿರುವುದಿಲ್ಲ.

**ಕಳ್ಳರು ಮಾಡಿರುವ ಕೃತ್ಯಗಳ ಛಾಯಾ ಚಿತ್ರಗಳು**



"ಶ್ರೀಗಂಧ ಬೆಳೆಯಿರಿ - ಸಿರಿವಂತರಾಗಿರಿ" ಅಂತ ಹೇಳಿ ಪ್ರತಿ ವರ್ಷ ಲಕ್ಷಾಂತರ ಸಸಿ ಬೆಳೆಸುವ ಅರಣ್ಯ ಇಲಾಖೆ, ಶ್ರೀಗಂಧದ ಜೊತೆ ಅತಿಥಿ ಸಸಿ, ತಿಳುವಳಿಕೆ ನೀಡದೆ KAPY - ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ಪ್ರೋತ್ಸಾಹ ಧನ ನೀಡದೆ ರೈತರಿಗೆ ಮೋಸ ಮಾಡಿರುತ್ತಾರೆ. ಅರಣ್ಯ ಇಲಾಖೆ ಕಛೇರಿಗೆ ಹೋದರೆ ಯಾವುದೇ ರೀತಿಯ ಸ್ಪಂದನೆ ನೀಡುತ್ತಿಲ್ಲ. ಮಾನ್ಯರು ಶ್ರೀಗಂಧ ಬೆಳೆಯನ್ನು ತೋಟಗಾರಿಕೆ ಇಲಾಖೆಗೆ ವಹಿಸಿದರೆ, ಶ್ರೀಗಂಧ ಬೆಳೆ ಮೌಲ್ಯ ಮಾಡಿದರೆ ಬ್ಯಾಂಕಿನಿಂದ ಸಾಲ, ವಿಮಾ ಸೌಲಭ್ಯ ದೊರೆಯುವುದರಿಂದ ರೈತರಿಗೆ ತುಂಬಾ ಅನುಕೂಲವಾಗುತ್ತದೆ. ಇದೊಂದು ಮಹದುಪಕಾರ ಮಾಡಿ ರೈತಾಪಿ ವರ್ಗವನ್ನು ಅರಣ್ಯ ಇಲಾಖೆಯ ಕಪಿಮುಷ್ಠಿಯಿಂದ ಬಿಡುಗಡೆಗೊಳಿಸಬೇಕೆಂದು ಕಳಕಳಿಯ ಪ್ರಾರ್ಥನೆ.

ನನ್ನ ಹೊಲದಲ್ಲಿ ಶ್ರೀಗಂಧದ ಮರಗಳ ಕಳುವಿನ ಬಗ್ಗೆ, ದಯಾಳುಗಳಾದ ತಾವು ಪೊಲೀಸ್ ಇಲಾಖೆಯ ಸಂಬಂಧ ಪಟ್ಟವರಿಗೆ ನಿರ್ದೇಶಿಸಿ ಕರ್ನಾಟಕ ಅರಣ್ಯ ಕಾಯ್ದೆ 1963, ಕಲಂ 86, 87 ರ ಪ್ರಕಾರ ಕೇಸು ದಾಖಲಿಸುವಂತೆ ತಿಳುವಳಿಕೆ ನೀಡಬೇಕೆಂದು ನಮ್ಮ ವಿನಂತಿ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಮಂಜುನಾಥ ಬಿನ್ ಶಿವರಾಯಪ್ಪ ಹಟ್ಟಿ)

(4)

ಮನವಿಯ ಪ್ರತಿಯನ್ನು ಗೌರವಪೂರ್ವಕವಾಗಿ ಅಗತ್ಯ ಕ್ರಮಕ್ಕಾಗಿ ನಿವೇದಿಸಿದೆ.

(1) ಡಾ|| ಜಿ. ಪರಮೇಶ್ವರ್ ರವರು,
ಮಾನ್ಯ ಗೃಹ ಸಚಿವರು,
ಕರ್ನಾಟಕ ಸರ್ಕಾರ,
ವಿಧಾನಸೌಧ, ಮೂರನೇ ಮಹಡಿ
ಬೆಂಗಳೂರು.

(2) ಸನ್ಮಾನ್ಯ ಶ್ರೀ ಕೃಷ್ಣಬೈರೇಗೌಡ ರವರು
ಮಾನ್ಯ ಕಂದಾಯ ಸಚಿವರು
ಕರ್ನಾಟಕ ಸರ್ಕಾರ
ಕೊಠಡಿ ಸಂಖ್ಯೆ 244-245
ವಿಕಾಸ ಸೌಧ, 2ನೇ ಮಹಡಿ
ಬೆಂಗಳೂರು 560001.

(3) ಸನ್ಮಾನ್ಯ ಶ್ರೀ ಈಶ್ವರ ಖಂಡ್ರೆ ರವರು
ಮಾನ್ಯ ಅರಣ್ಯ, ಜೀವಿ ವೈವಿಧ್ಯ ಮತ್ತು
ಪರಿಸರ ಸಚಿವರು
ಕರ್ನಾಟಕ ಸರ್ಕಾರ, ಕೊಠಡಿ ಸಂ.36-37,
ಮೊದಲನೇ ಮಹಡಿ ವಿಕಾಸ ಸೌಧ,
ಬೆಂಗಳೂರು 560001.

(4) ಸನ್ಮಾನ್ಯ ಶ್ರೀ ಎಸ್ ಎಸ್ ಮಲ್ಲಿಕಾರ್ಜುನ ರವರು
ಮಾನ್ಯ ತೋಟಗಾರಿಕೆ ಮತ್ತು ಗಣಿ ಮತ್ತು ಭೂ ವಿಜ್ಞಾನ ಸಚಿವರು
ಕರ್ನಾಟಕ ಸರ್ಕಾರ
ವಿಧಾನ ಸೌಧ, ಮೂರನೇ ಮಹಡಿ
ಬೆಂಗಳೂರು.

→ (5) ಕೆ. ಅಮರನಾರಾಯಣ ಭಾ ಆ ಸೇ (ನಿವೃತ್ತ)
ಗೌ. ಅಧ್ಯಕ್ಷರು, ಅಖಿಲ ಕರ್ನಾಟಕ ಶ್ರೀಗಂಧ ಮತ್ತು
ವನಕೃಷಿ ಬೆಳೆಗಾರರ ಸಂಘ
ನಂ. 300, 10 ನೇ ಮೇನ್ ರಸ್ತೆ, 14ನೇ ಕ್ರಾಸ್,
2ನೇ ಹಂತ, ಇಂದಿರಾನಗರ,
ಬೆಂಗಳೂರು 560038.

(5)

ಉಲ್ಲೇಖ-2

ದಿನಾಂಕ 01 ನೇ ಆಗಸ್ಟ್, 2023

ರವರಿಂದ

**ನೋಂದಣಿ ಅಂಚೆ ಸ್ವೀಕೃತಿ ಸಹಿತ**

ಹೊಂಬೇಗೌಡ ಬಿನ್ ಸುಬ್ಬೇಗೌಡ,
ಬಾಣಸಮುದ್ರ, ಮಳವಳ್ಳಿ ತಾಲ್ಲೂಕು,
ಮಂಡ್ಯ ಜಿಲ್ಲೆ.
ಪಿನ್ 571421

ರವರಿಗೆ

ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ನವರು
ಮುಖ್ಯ ಮಂತ್ರಿಗಳು
ಕರ್ನಾಟಕ ಸರ್ಕಾರ,
ವಿಧಾನ ಸೌಧ, 3ನೇ ಮಹಡಿ
ಬೆಂಗಳೂರು 560001.

ಮಾನ್ಯರೇ,

**ವಿಷಯ: ಶ್ರೀಗಂಧ ಬೆಳೆ ರಕ್ಷಣೆ ಕುರಿತು.**

~~ತಮ್ಮಲ್ಲಿ ಈ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ ಈ ಕೆಳಗೆ ಸಹಿ ಮಾಡಿದ ನಾನು,~~ ಹೊಂಬೇಗೌಡ ಬಿನ್ ಸುಬ್ಬೇಗೌಡ, ಬಾಣಸಮುದ್ರ ಗ್ರಾಮ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಭಿನ್ನವಿಸುವುದೇನೆಂದರೆ :

ನಾನು ವ್ಯವಸಾಯಗಾರನಾಗಿದ್ದು, ನನ್ನ ಹೆಸರಿನಲ್ಲಿರುವ ಸರ್ವೇ ನಂಬರ್ 145, 1-ಎಕರೆ 30 ಗುಂಟೆ ಮತ್ತು ಹೆಂಡತಿ ಶ್ರೀಮತಿ ಅನ್ನಪೂರ್ಣಮ್ಮ ಬಿ.ಕೆ. ಇವರ ಹೆಸರಿಗೆ 1 ಎಕರೆ ಜಮೀನು ಇರುತ್ತದೆ. 2018 ಮತ್ತು 2019 ನೇ ಇಸ್ವಿಯಲ್ಲಿ ಆರ್. ಎಫ್. ಓ ಕಛೇರಿ, ರಾಮನಗರದಿಂದ ಮತ್ತು ಚನ್ನಪಟ್ಟಣ ಅರಣ್ಯ ಇಲಾಖೆಯಿಂದ ಒಟ್ಟು 1500 ಶ್ರೀಗಂಧ ಸಸಿಗಳನ್ನು ಆರ್.ಎಸ್.ಪಿ.ಡಿ ಯೋಜನೆಯಡಿಯಲ್ಲಿ ತಂದು ನಾಟಿ ಮಾಡಿರುತ್ತೇನೆ. ನಾಟಿ ಮಾಡುವ ವಿಧಾನದ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ಶ್ರೀಗಂಧ ಸಸಿ ನೀಡುವ ಕಾಲಕ್ಕೆ ಯಾವುದೇ ಆಶ್ರಯ ಸಸಿ (Host plants) ಗಳನ್ನು ನೀಡಿರುವುದಿಲ್ಲ.

ಈಗ 1500 ನಾಟಿ ಮಾಡಿದ ಸಸಿಗಳ ಪೈಕಿ 1200 ಮಾತ್ರ ಉಳಿದಿರುತ್ತವೆ. 300 ಸಸಿಗಳು ನಾಶವಾಗಿರುತ್ತವೆ. ಕಾರಣ, ಆಶ್ರಯ ಸಸಿಗಳ ನಾಟಿ ಮಾಡದಿರುವುದೇ ಕಾರಣ ಎಂದು ತಿಳಿಯಿತು. ಇಂತಹ ಮೂಲಭೂತ ಮಾಹಿತಿಗಳನ್ನು ಅರಣ್ಯ ಇಲಾಖೆಯು ನೀಡದಿರುವುದು ಉತ್ತಮ ಶ್ರೀಗಂಧ ಬೆಳೆ ವಿಫಲವಾಗಲು ಕಾರಣವಾಗಿದೆ.

ನನಗೆ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ಅಡಿಯಲ್ಲಿ ಪ್ರೋತ್ಸಾಹದ ಧನ ಸಹಾಯವೆಂದು 800 ಸಸಿ ಗಳಿಗೆ ಮಾತ್ರ 2021 ರಲ್ಲಿ ₹36,000/-, 2022 ರಲ್ಲಿ ₹35,400/-

(6)

ಕೊಟ್ಟಿರುತ್ತಾರೆ. ಒಟ್ಟು ₹71,400/- ಹಣ ಅರಣ್ಯ ಇಲಾಖೆಯಿಂದ ಬಂದಿರುತ್ತದೆ. 1200 ಸಸಿ ಗಳಿಗೆ ಕೇಳಿದರೆ, ಕೇವಲ 800 ಬದುಕುಳಿದ ಸಸಿಗಳಿಗೆ ಮಾತ್ರ ಕೊಡಲು ಬರುತ್ತದೆ ಎಂದು ತಿಳಿಸಿದರು.

ದಿನಾಂಕ 23.03.2023ರಲ್ಲಿ ಬಂದೂಕು (ಗನ್) ಪರವಾನಿಗೆ ಕುರಿತು ಭರ್ತಿ ಮಾಡಿದ ನಿಗದಿತ ಅರ್ಜಿಯೊಂದಿಗೆ ಮಾನ್ಯ ಜಿಲ್ಲಾಧಿಕಾರಿಗಳು ಮಂಡ್ಯ, ಇವರಿಗೆ ಭೇಟಿ ಮಾಡಿ ವಿಚಾರಿಸಲಾಗಿ, ಅವರು ನಾವು ಕೊಡುವುದಿಲ್ಲ, S.P ರವರಿಗೆ ಭೇಟಿ ಮಾಡಲು ತಿಳಿಸಿದ ಪ್ರಕಾರ ಮಂಡ್ಯ S.P ರವರಿಗೆ ಭೇಟಿ ಮಾಡಲಾಗಿ, ಇಲ್ಲಿ ಗಲಾಟೆ ಜಾಸ್ತಿ, ಆದ್ದರಿಂದ ಲೈಸೆನ್ಸ್ ಕೊಡಲು ಬರುವುದಿಲ್ಲ ಅಂತ ತಿಳಿಸಿದರು. ನಾವು ಶ್ರೀಗಂಧ ಬೆಳೆಗಾರರು, ಬೆಳೆ ಮತ್ತು ನಮ್ಮ ರಕ್ಷಣೆಗೆ ಗನ್ ಪರವಾನಗಿ ಅವಶ್ಯವಾಗಿರುತ್ತದೆ ಎಂದು ತಿಳಿಸಿದರೂ ಸಹ ಕೇಳಲಿಲ್ಲ. ಗನ್ ತರಬೇತಿ ಕೊಡಿ ಅಂತ ಕೇಳಿದಾಗ, ನಾವು ಕೊಡುವುದಿಲ್ಲ ನೀವು ಖಾಸಗಿಯವರ ಹತ್ತಿರ ತರಬೇತಿ ಪಡೆಯಿರಿ ಅಂತ ವಾಪಸ್ ಕಳುಹಿಸಿದರು. ನಂತರ ವಿಚಾರಿಸಲಾಗಿ, ರಾಜ್ಯದ ಅನೇಕ ಕಡೆ ಪೊಲೀಸ್ ಠಾಣಾ ಅಧಿಕಾರಿಯವರು, ತರಬೇತಿ ಬೇಕೆಂದು ಅರ್ಜಿ ನೀಡಿದವರಿಗೆ, ಜಿಲ್ಲಾ ಪೊಲೀಸ್ ಅಧೀಕ್ಷಕರ ಪರವಾನಗಿ ಪಡೆದು ಜಿಲ್ಲಾ ಸಶಸ್ತ್ರ ಮೀಸಲು ಪಡೆ ಪೊಲೀಸ್ ಅಧಿಕಾರಿಗಳ ಮುಖಾಂತರ 10 ದಿನ ಆಯಾ ಠಾಣಾ ವ್ಯಾಪ್ತಿಯ ಫೈರಿಂಗ್ ರೇಂಜ್ ನಲ್ಲಿ ಬಂದೂಕು ಬಗ್ಗೆ, ಉಪಯೋಗಿಸುವ ಬಗ್ಗೆ ತರಬೇತಿ ನೀಡಿ ತರಬೇತಿ ಪತ್ರ ನೀಡುತ್ತಿದ್ದಾರೆ. ಮಂಡ್ಯ S.P ರವರು ಈ ರೀತಿ ರೈತರಿಗೆ ತರಬೇತಿ ಕೊಡಿಸಲು ಅನುವು ಮಾಡುವುದು ಬಿಟ್ಟು ಖಾಸಗಿಯವರ ಕಡೆ ಹೋಗಲು ತಿಳಿಸಿದ್ದು ತುಂಬಾ ವಿಷಾದನೀಯ. ದಿನಾಂಕ 21.07.2023ರಂದು ಮಳವಳ್ಳಿ ತಾಲ್ಲೂಕಿನ 9 ಜನ ಶ್ರೀಗಂಧ ಬೆಳೆಗಾರರು ಪುನಃ ಗನ್ ಲೈಸೆನ್ಸ್ ಗಾಗಿ ಅರ್ಜಿಯನ್ನು ಮಂಡ್ಯ ಜಿಲ್ಲಾಧಿಕಾರಿಗಳಿಗೆ ನೀಡಿರುತ್ತಾರೆ.

ಆದ್ದರಿಂದ ದಯಾಳುಗಳಾದ ತಾವು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿ, ಶ್ರೀಗಂಧ ಬೆಳೆ ರಕ್ಷಣೆ ಮಾಡಿಕೊಳ್ಳಲು, ಬಂದೂಕು ಹೊಂದಲು ಪರವಾನಗಿ ನೀಡಲು ಸೂಚಿಸಬೇಕೆಂದು ವಿನಂತಿ.

ಅರಣ್ಯ ಇಲಾಖೆ ಶ್ರೀಗಂಧ ಬೆಳೆಯನ್ನು ಬೆಳೆಯುವ ರೈತರಿಂದ ಸಸಿಗಳ ವಿವರ ಪಡೆಯದೆ, ಒಳ್ಳೆಯ ಸಸಿಗಳನ್ನು ನೀಡದೆ, ಅತಿಥಿ ಸಸಿಗಳನ್ನು ನೀಡದೆ ಹಲವಾರು ವರ್ಷಗಳಿಂದ ಶ್ರೀಗಂಧ ಬೆಳೆಗಾರರನ್ನು ವಂಚಿಸುತ್ತಿದ್ದಾರೆ. ರೈತರಿಗೆ ಯಾವುದೇ ರೀತಿಯ ಸ್ಪಂದನೆ, ಸಲಹೆ ನೀಡುತ್ತಿಲ್ಲ. ಆದ್ದರಿಂದ ಶ್ರೀಗಂಧ ಬೆಳೆಯನ್ನು ತೋಟಗಾರಿಕೆ ಇಲಾಖೆಗೆ ವಹಿಸಿ, ಅರಣ್ಯ ಇಲಾಖೆಯಿಂದ ಕಟಾವಣೆ, ಸಾಗಾಟ ಮಾರಾಟವನ್ನು ಮುಕ್ತಗೊಳಿಸಿದರೆ ಮಾತ್ರ, ನನ್ನಂತ ಸಾವಿರಾರು ಶ್ರೀಗಂಧ ಬೆಳೆದ ರೈತರ ಬಾಳಿಗೆ ಬೆಳಕಾಗುತ್ತದೆ ಅಂತ ನನ್ನ ಮನವಿ. ಈಗಾಗಲೇ ಮಹಾರಾಷ್ಟ್ರ ಸರ್ಕಾರ ಶ್ರೀಗಂಧವನ್ನು ಅರಣ್ಯ ಇಲಾಖೆಯಿಂದ ಮುಕ್ತ ಮಾಡಿದ್ದು, ನಮ್ಮ ರಾಜ್ಯದಲ್ಲೂ ಸಹ ಶ್ರೀಗಂಧದ ಬೆಳೆಯನ್ನು ಅರಣ್ಯ ಇಲಾಖೆಯಿಂದ ಮುಕ್ತಗೊಳಿಸಲು ವಿನಂತಿ.

ವಂದನೆಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ

(ಹೊಂಬೇಗೌಡ ಬಿನ್ ಸುಬ್ಬೇಗೌಡ)
ಬಾಣಸಮುದ್ರ, ಮಳವಳ್ಳಿ ತಾಲ್ಲೂಕು,
ಮಂಡ್ಯ ಜಿಲ್ಲೆ.

(7)

ಮನವಿಯ ಪ್ರತಿಯನ್ನು ಗೌರವಪೂರ್ವಕವಾಗಿ ಅಗತ್ಯ ಕ್ರಮಕ್ಕಾಗಿ ನಿವೇದಿಸಿದೆ.

(1) ಡಾ|| ಜಿ. ಪರಮೇಶ್ವರ್ ರವರು,
ಮಾನ್ಯ ಗೃಹ ಸಚಿವರು,
ಕರ್ನಾಟಕ ಸರ್ಕಾರ,
ವಿಧಾನಸೌಧ, ಮೂರನೇ ಮಹಡಿ
ಬೆಂಗಳೂರು.

(2) ಸನ್ಮಾನ್ಯ ಶ್ರೀ ಕೃಷ್ಣಬೈರೇಗೌಡ ರವರು
ಮಾನ್ಯ ಕಂದಾಯ ಸಚಿವರು
ಕರ್ನಾಟಕ ಸರ್ಕಾರ
ಕೊಠಡಿ ಸಂಖ್ಯೆ 244-245
ವಿಕಾಸ ಸೌಧ, 2ನೇ ಮಹಡಿ
ಬೆಂಗಳೂರು 560001.

(3) ಸನ್ಮಾನ್ಯ ಶ್ರೀ ಈಶ್ವರ ಖಂಡ್ರೆ ರವರು
ಮಾನ್ಯ ಅರಣ್ಯ, ಜೀವಿ ವೈವಿಧ್ಯ ಮತ್ತು
ಪರಿಸರ ಸಚಿವರು
ಕರ್ನಾಟಕ ಸರ್ಕಾರ, ಕೊಠಡಿ ಸಂ.36-37,
ಮೊದಲನೇ ಮಹಡಿ ವಿಕಾಸ ಸೌಧ,
ಬೆಂಗಳೂರು 560001.

(4) ಸನ್ಮಾನ್ಯ ಶ್ರೀ ಎಸ್ ಎಸ್ ಮಲ್ಲಿಕಾರ್ಜುನ ರವರು
ಮಾನ್ಯ ತೋಟಗಾರಿಕೆ ಮತ್ತು ಗಣಿ ಮತ್ತು ಭೂ ವಿಜ್ಞಾನ ಸಚಿವರು
ಕರ್ನಾಟಕ ಸರ್ಕಾರ
ವಿಧಾನ ಸೌಧ, ಮೂರನೇ ಮಹಡಿ
ಬೆಂಗಳೂರು.

✓ (5) ಕೆ. ಅಮರನಾರಾಯಣ ಭಾ ಆ ಸೇ (ನಿವೃತ್ತ)
ಗೌ. ಅಧ್ಯಕ್ಷರು, ಅಖಿಲ ಕರ್ನಾಟಕ ಶ್ರೀಗಂಧ ಮತ್ತು
ವನಕೃಷಿ ಬೆಳೆಗಾರರ ಸಂಘ
ನಂ. 300, 10 ನೇ ಮೇನ್ ರಸ್ತೆ, 14ನೇ ಕ್ರಾಸ್,
2ನೇ ಹಂತ, ಇಂದಿರಾನಗರ,
ಬೆಂಗಳೂರು 560038.

(9)



**SCHEDULE-III**

**Part II**

**Application Forms**

**Form A-1**

***(For individuals)***

**Form of Application for an Arms License**

**In Form II, III and IV**

***(See rule 11)***

| **IDENTITY OF THE APPLICANT** | | | | |
|---|---|---|---|---|
| 1. | Name | S. HOMBEGOWDA | | |
| 2. | Parent/Spouse Name | C/o. SUBBEGOWDA | | |
| 3. | Sex | Male ☑ | Female ☐ | |
| 4. | Place of birth (Nativity) | Country<br>INDIA | State<br>KARNATAKA | District<br>RAMANAGARA |
| 5. | Date of birth in Christian era | | | |
| | In figures | 22-07-1957. | | |
| | In words | Twentytwo seven nineteen fiftyseven | | |
| 6. | Permanent Account No. (PAN) | ABRTH2791P | | |
| 7. | Aadhar Card Number | 8530 7910 8828 | | |
| 8. | Present address | #252, 2ND CROSS, 2ND MAIN, KHB LAYOUT MAHADESHWARA NAGAR, CHANNAPATNA. | | |
| | | District<br>RAMANAGARA | State<br>KARNATAKA | |
| a. | Since when residing at the present address | ~~1957.-19.~~ 2015 | | |
| b. | Telephone Number | Office: — | Residence: — | |
| c. | Mobile Number | 9449788159. | | |
| d. | *Nearest Police Station | CHANNAPATANA (EAST) | | |
| 9. | Permanent Address | AS THE ABOVE | | |
| | | District<br>RAMANAGARA | State<br>KARNATAKA. | |
| a. | *Nearest Police Station | CHANAPATANA (EAST) | | |
| 10. | Occupation | Rtd. Officer. | | |

*Note-*Nearest Police Station means the police station under whose jurisdiction the place given in the address comes*

| | | | |
|---|---|---|---|
| 11. | Office/business address | — | |
| 12. | Additional particulars if the license is required for crop protection undr rule 35 | Location (village) | BANASAMUDRRA |
| | | Area of land under cultivation | 3 ACRES |

(10)

**Form S-1**

**Standard format of training certificate**

*[See rule 10(1)]*

To

The Licensing Authority,

____________________

**Training Certificate**

This is to certify the person whose particulars are furnished below has completed the training as stipulated under rule 10(1) of the Arms Rules, 2016 –

| | | |
|---|---|---|
| 1 | Name of the person | |
| 2 | Father's Name/Spouse Name | |
| 3 | Residential address | |
| 4 | Age and date of birth | |
| 5 | Training period undergone | From _/_/_ To _/_/_ |
| 6 | Details of firearms for which training has been imparted *(please specify)* | 1. Handguns<br>2. Rifle<br>3. Shotguns<br>4. Air weapons |
| 7 | Purpose of training *(please specify)* | 1. Application for arms licence<br>2. Employ with arms dealer<br>3. Employ with manufacturer<br>4. Others |

The training curriculum included the following modules:

a) basic arms and ammunition safety practices, including safe handling and carry procedures;

b) firing techniques and procedures;

c) care of arms and ammunition;

d) safe storage and transportation of arms and ammunition.

The person named above was also imparted reasonable working knowledge of important provisions of the Arms Act, 1959 and Arms Rules, 2016 relevant to him and made to understand responsibilities of the arms owner or user, particularly in relation to children.

Date

Place

SEAL

Signatures of the

Certifying Person

**Form S-2**

**Standard format of undertaking for safe storage of firearms**

*[See rule 10(4)]*

To

The Licensing Authority,

____________________________

____________________________

**Undertaking**

This is to solely affirm and declare that –

1. I have applied for grant of a new arms license.
2. I undertake to practice safe storage of the firearm (in knocked down condition) when I am not carrying the firearm(s) with me.
3. I undertake to educate the children about the dangers of interacting with arms and ammunition.
4. I have the capacity to store the firearm safely and securely in a safe or steel almirah in order to minimize the risk that it could be stolen or accessed by someone else.

It is hereby solemnly affirmed that the declaration made above is true to the best of my knowledge and belief and if at any subsequent date, if any of the said declarations is found false or incorrect, I shall be liable for the same including cancellation or revocation of my license and subject to penal provisions under the Arms Act, 1959.

Place: Signature of the Applicant

Date:

Name :
Fathers Name :
Address :

Note: Enclose proof of safe storage as mentioned at S.No 4

(12)

**Form S-3**

**Standard format of medical certificate**

*[See clause (g) of sub-rule (4) of rule 11)] (On the letter head of the medical practitioner)*

This is to certify that I have carefully examined the person whose particulars are furnished below –

| | | |
|---|---|---|
| 1. | Name of the person examined | S. HOMBEGOWDA |
| 2. | Father's Name/Spouse Name | SUBBEGOWDA |
| 3. | Residential address | #252, 2ND CROSS. 2ND MAIN KHB LAYOUT. MAHADESHWARANAGAR CHANNAPATNA |
| 4. | Age and date of birth | 22-07-1957. (65 years) |
| 5. | Height | 170 cm |
| 6. | Weight (in Kgs) | 69 kg |
| 7. | Blood pressure (please specify) | 143/92 |
| 8. | Deformity, if any<br>(particularly in upper limbs) | —Nil— |
| 9. | Any other observation | — |

On the basis of examination, it is certified that the person examined as mentioned in column 1 above –

1. is in good physical health and is free from any physical deformity;
2. has been found to be of stable mental condition and is not inclined to violence;
3. has been found not dependent on any substance which has an intoxicating or narcotic effect.

Signature of the person examined *named in column (1)* ______________

Signature of the medical practitioner ______________ [signature]

Registration Number ______________

ಡಾ॥ ಎಸ್. ಪಿ. ಮ್ಯುತ್ತಣ್ಣ M.D.,
SEAL ಫಿಜಿಷಿಯನ್
ಸಾರ್ವಜನಿಕ ಆಸ್ಪತ್ರೆ, ಮಳವಳ್ಳಿ,
ಮಂಡ್ಯ ಜಿಲ್ಲೆ. KMC : 33179

13

UHID: 20230021900

GH MALAVALLI
TALUKA HOSPITAL MALAVALLI

CONSULTING ROOM NO :17, TOKEN NO : 13
Clinic physician
Days:MON,TUE,WED,THU,FRI,SAT

EHR ID : 2023000202193508

**OUT PATIENT RECORD**

Name : MR. S OMBEGOWDA
Department : physician
Dept No. : 2023/080/0003153
Date of Registration : 21-03-2023 12:43:15 PM
Unit: : UNIT 1
Age : 65Y
Billing Type : General
Mobile No :
Address : CHANNAPATTANA TOWN, Ramanagara, KARNATAKA, INDIA
Patient Type:NON MLC

Fee : 5.00
Sex : Male
S/O LATE SUBBEGOWDA
Island Id :
Occupation : OTHER
Prepared by:Mrs. Pushpa pushpa

**Date and Time of initial assessment: :**

**Clinical History :**

**Examination Findings :**

Sleeg

**Investigation :**

**Diagnosis :**

**Treatment :**

**Follow-up advice :**

Height – 170 cm
Weight – 69 kg
RBS – 175 mg/dl
BP – 143/92 mm Hg
vision Test 6/18 . 6/9
mg 6/18 6/9

Doctor's Name
Signature / Date

ಡಾ॥ ಎನ್. ವಿ. ಸತೀಶ M.D.
ಫಿಜಿಷಿಯನ್
ಸಾರ್ವಜನಿಕ ಆಸ್ಪತ್ರೆ, ಮಳವಳ್ಳಿ,
ಮಂಡ್ಯ ಜಿಲ್ಲೆ. KMC : 33179

(14)

| OTHER PARTICULARS OF THE APPLICANT | | | | |
|---|---|---|---|---|
| 13. | Whether the applicant has been - | | | |
| a. | Convicted | | | |
| b. | Ordered to exeute a bond undr Chapter VII of Code of Criminal Procedure, 1973 (2 of 1974) of keeping the peace or for good behavior | | | |
| c. | Prohibited under the Arms Act, 1959, or any other law from having the arms or ammunition | | | |
| 14. | Whether - | | | |
| a. | The applicant applied for a license before-if so, when, to whom and with what result | | | |
| b. | the applicant's license was ever suspended or cancelled/revoked | | | |
| c. | any other member of the applicant's family is in possession of any arms license, if so, particulars thereof | | | |
| d. | the applicant has a safe place to keep the arms and ammunition | | | |
| e. | the applicant has undergone training as specified under rule 10 (whenever made applicable by the Central Govenment) | | | |

| Particulars of license being applied for | | |
|---|---|---|
| 15. | Need for license (see note 1 before) | |
| 16. a. | Description of arms for which license is being sought<br>(Tick any one of the options) | Category-restricted<br>Rifle ☐<br>Shot gun (BL/ML) ☐<br>Hand Gun (Revolver/Pistol) ☐<br>Others ☐ |
| b. | Description of ammunition or ingredients of ammunition for which license is being sought | |
| 17. | Area within which applicant wishes to carry arms<br>(Tick any one of the options) | District ☐<br>State ☑<br>Throughout India ☐ |
| 18. | Claims for special consideration for obtating the license, if any<br>(attach documentary evidence) | |
| 19. | Details for an application for license in Form IV | |
